ಬಿಟ್ಟುಕೊಂಡು ನೋಡುತ್ತಾರೆ. ಯಾರೋ ಸುಮ್ಮ ಸುಮ್ಮನೆ ಕೆಣಕಿ, ಬಕ್ರಾ ಮಾಡಿ ಕಾರ್ಯಕ್ರಮ ಮಾಡ್ತಾನೆ. ಅಮಾಯಕರು ಅದಕ್ಕೆ ಬಲಿ ಆಗ್ತಾರೆ. ಅದೂ ಮನರಂಜನೆಯಂತೆ. ನಾವು ಎಲ್ಲಿದ್ದೀವಿ.'

ಈ ಎರಡೂ ಅಭಿಪ್ರಾಯಗಳು ಭಾಷಿಕವಾಗಿ ಹಾಗೂ ಮನರಂಜನೆಯ ಅಭಿರುಚಿಯ ದೃಷ್ಟಿಯಿಂದ ತುಂಬಾ ಮುಖ್ಯ. ರೇಡಿಯೊ ಹಾಗೂ ಸಾಮಾಜಿಕ ಜಾಲತಾಣಗಳು ಕನ್ನಡವನ್ನು ವಿಪರೀತ ಕಲಸುಮೇಲೋಗರ ಮಾಡಿವೆ. ಇಂಗ್ಲಿಷ್ ಬೆರೆತ ನಗರದ ಹೊಸ ನುಡಿಗಟ್ಟುಗಳಿಗೆ ಈಗ ಕಾಲ. ವೈಯಾಕರಣಿಗಳು ಇದನ್ನು ಟೀಕಿಸುವುದು ಸಹಜವೇ. ಆದರೆ, ಇವುಗಳಿಗೆ ಗ್ರಾಹಕವರ್ಗ ಹುಟ್ಟಿಕೊಂಡಿದೆ. ಭಾಷಾ ಸೂಕ್ಷ್ಮಗಳನ್ನು ಬದಿಗಿಟ್ಟು, ಯಃಕಶ್ಚಿತ್ ರಂಜನೆಯಾಗಿ ಇಂಥ ಪ್ರಯೋಗಗಳನ್ನು ಅಥವಾ ತರಲೆಗಳನ್ನು ಒಪ್ಪಿಕೊಂಡಿರುವ ನಗರದ ನಾಗರಿಕರ ಸಂಖ್ಯೆ ಹೆಚ್ಚಾಗಿದೆ.

'Prank' ಎಂಬ ಇಂಗ್ಲಿಷ್ ಪದಕ್ಕೆ ಕುಚೇಷ್ಟೆ, ಹುಚ್ಚಾಟ, ಲೇವಡಿ ಎಂಬೆಲ್ಲ ಅರ್ಥಗಳಿವೆ. ಅದು ವ್ಯಕ್ತಿತ್ವದ ಭಾಗವಾಗಿ, ಅಭಿವ್ಯಕ್ತಿಯ ನಡುವೆ 'ರಿಲೀಫ್' ಆಗಿ ಒದಗಿಬರುತ್ತಿದ್ದುದನ್ನು ಹಿಂದಿನಿಂದ ನೋಡಿದ್ದೇವೆ. ಈಗ ಈ ಗುಣವನ್ನೇ ವೃತ್ತಿ ಮಾಡಿಕೊಂಡವರಿದ್ದಾರೆ. 'ಕುಚೇಷ್ಟೆಗಾರ' ಎನ್ನುವ ಗುಣವಿಶೇಷಣಕ್ಕೆ ಸಕಾರಾತ್ಮಕ ಅರ್ಥ ದಕ್ಕಿದೆ. ಅದು ವೃತ್ತಿಪರ ರೇಡಿಯೊ ಜಾಕಿಗಳ ಅರ್ಹತೆಯೂ ಆಗಿದೆ.

ದಾನಿಷ್ ಸೇಠ್ (ಕೆಲವರು ಡ್ಯಾನಿಷ್ ಸೇಠ್ ಎಂದೂ ಸ್ಟೈಲಾಗಿ ಕರೆಯುವುದುಂಟು) ಇಂಥ ವೃತ್ತಿಪರರಲ್ಲಿ ಮುಖ್ಯರು.

ಅವರು ರೇಡಿಯೊ ಜಾಕಿಯಾಗಿ ಕೆಲವು ಪಾತ್ರಗಳನ್ನು ಸೃಷ್ಟಿಸಿದ್ದರು. ನೊಗರಾಜ್, ಮೊಂಜುನಾಥ್ ಅವುಗಳಲ್ಲಿ ಹೆಚ್ಚು ಜನಪ್ರಿಯವಾದಂಥವು. ಹೀಗೆ ನಾಮಪದಗಳಿಗೆ 'ಒ'ಕಾರ ಸೇರಿಸುವುದು ಬಂಗಾಳಿಗಳ ಸಂಸ್ಕೃತಿ. ಕನ್ನಡಕ್ಕೆ ಏನೇನೂ ಸಂಬಂಧವಿಲ್ಲ. ಆದರೂ ದಾನಿಷ್ ಈ ಕುಚೇಷ್ಟೆಯನ್ನು ಕನ್ನಡಕ್ಕೆ ಒಗ್ಗಿಸಿದರು. ದುಬೈನ ರೇಡಿಯೊ ವಾಹಿನಿಯಲ್ಲಿ ಕೆಲಸ ಮಾಡಿ ಇಂತಹ ವರಸೆಗಳಲ್ಲಿ ಪಳಗಿದ ಅವರ ಜನಪ್ರಿಯತೆ ಯಾವ ಮಟ್ಟಕ್ಕೆ ಏರಿತೆಂದರೆ, ಅವೇ ಪಾತ್ರಗಳನ್ನು ಇಟ್ಟುಕೊಂಡು ಒಂದು ಕನ್ನಡ ಚಿತ್ರವನ್ನೇ ನಿರ್ಮಿಸಲು ರಕ್ಷಿತ್ ಶೆಟ್ಟಿ, ಹೇಮಂತ್ ಎಂ. ರಾವ್ ತರಹದವರು ಮುಂದಾದರು. ಅದರ ಫಲವೇ 'ಹಂಬಲ್ ಪೊಲಿಟಿಷಿಯನ್ ನೊಗ್‌ರಾಜ್'.

ಇದು ನಗರದ ಪುಡಿ ರಾಜಕಾರಣಿಯೊಬ್ಬನ ಕಥೆಯ ಸಿನಿಮಾ. ಅವನಿಗೆ ದೊಡ್ಡ ರಾಜಕಾರಣಿಯಾಗುವ ಮಹತ್ವಾಕಾಂಕ್ಷೆ. ಕಾರ್ಪೊರೇಟರ್ ಆಗಿರುವ ಅವನು ಶಾಸಕನಾಗಲು ಪಕ್ಷವೊಂದರ ಟಿಕೆಟ್‌ಗಾಗಿ ಹೂಡುವ ತಂತ್ರಗಳೇ ಸಿನಿಮಾ ಕಥನದ ಎಳೆ.

ಚುನಾವಣೆಯ ಕಾವು ಶುರುವಾಗಿರುವ ಹೊತ್ತಿನಲ್ಲಿ ತೆರೆಕಂಡಿದ್ದರಿಂದ ಈ ಸಿನಿಮಾಗೆ ಸಾಂದರ್ಭಿಕ ಮಾರುಕಟ್ಟೆ ದೊರೆಯಬಹುದೆಂಬ ಲೆಕ್ಕಾಚಾರವೂ ಇದ್ದಿರಬಹುದು. ಆದರೆ, ಇದು ಇಡೀ ರಾಜ್ಯಕ್ಕೆ ಅನ್ವಯಿಸಬಹುದಾದ ರಾಜಕೀಯ ಹೂರಣವನ್ನು ಒಳಗೊಂಡಿಲ್ಲ. ಹಿಂದೆ ಟಿ.ಎನ್. ಸೀತಾರಾಂ ನಿರ್ದೇಶಿಸಿದ್ದ, ಎಸ್.ಎಲ್. ಭೈರಪ್ಪನವರ ಕಾದಂಬರಿ ಆಧರಿಸಿದ 'ಮತದಾನ'ಕ್ಕೆ ಅಂಥದೊಂದು ದೊಡ್ಡ ಭಿತ್ತಿ ಇತ್ತು. ಆದರೂ ಅದು ಜನಮನ ಗೆದ್ದಿರಲಿಲ್ಲ.

ಈ ರಾಜಕಾರಣಿಯ ವಸ್ತುವಿನ ಚಿತ್ರದಲ್ಲಿ ನಗರ ಸಂವೇದನೆಯೇ ಹೆಚ್ಚಾಗಿದೆ. ಅಭಿನಯದ ಮಾನದಂಡ ಅಳೆಯಲು ವೈಯಾಕರಣಿಗಳು ಬಳಸುವ 'ಹಿಸ್ಟ್ರಿಯಾನಿಕ್ಸ್' (ಇದು ಒಂದು ಬಗೆಯಲ್ಲಿ ಅಭಿನಯದಲ್ಲಿನ ಆಷಾಢಭೂತಿತನ) ಹೆಚ್ಚು ಬಳಕೆಯಾಗಿದೆ. ದಾನಿಷ್ ತಮ್ಮ ಮುಖಭಾವವನ್ನು ಹೆಚ್ಚೇ ಏಕತಾನವಾಗಿಯೂ, ನಿರ್ಭಾವುಕವಾಗಿಯೂ ಮಾಡಿಕೊಂಡು